





# ಈ ನಕ್ಷತ್ರ ಹೂವು!

■ ರಾಮಪ್ರಸಾದ ಬಿ



ಪೆಂಟಾಸ್ ಲ್ಯಾನ್ಸ್ ಒಲಾಟ! ಬಿಳಿ, ಕೆಂಪು, ನೇರಳೆ ಮತ್ತು ತಿಳಿಗುಲಾಬಿ ಬಣ್ಣಗಳ ಈ ಐದು ಪುಟ್ಟ ದಳಗಳ ನಕ್ಷತ್ರಾಕಾರದ ಹೂಗಳು ಕೈತೋಟಪ್ರಿಯರ ಅಚ್ಚುಮೆಚ್ಚು. ಚಿಟ್ಟೆ ಪಾರ್ಕ್‌ಗಳಲ್ಲೂ ಈ ಗಿಡಗಳು ಹೆಚ್ಚಾಗಿ ಕಂಡು–ಬರುತ್ತವೆ. ಏಕೆಂದರೆ ಚಿಟ್ಟೆಗಳನ್ನು ಹೆಚ್ಚಾಗಿ ಈ ಹೂವು ಆಕರ್ಷಿಸುತ್ತದೆ. ಕೆಂಪು ಮತ್ತು ಕಡು ಗುಲಾಬಿ ಬಣ್ಣದ ಹೂಗಳೆಂದರೆ ಹಮ್ಮಿಂಗ್ ಬರ್ಡ್‌ಗೂ ಅಚ್ಚುಮೆಚ್ಚು.

ಬೇಸಿಗೆಯ ಉದ್ದಕ್ಕೂ ಹೂಗಳನ್ನು ಬಿಡುವ ಈ ಪೊದೆಗಿಡ, ಒಂದರಿಂದ ಎರಡು ಅಡಿ ಎತ್ತರದಷ್ಟು ಬೆಳೆಯುತ್ತದೆ. ಅಗಲಕ್ಕೂ ಅಷ್ಟೇ ವಿಸ್ತೀರ್ಣದಲ್ಲಿ ಹಬ್ಬುತ್ತದೆ. ಆಫ್ರಿಕಾ ಮೂಲದ ಈ ಪೊದೆಗಿಡಗಳನ್ನು ಕೈತೋಟದ ಅಂದ ಹೆಚ್ಚಿಸಲು ಅಥವಾ ಸುತ್ತಲೂ ಬಾರ್ಡರ್‌ನಲ್ಲಿ ಬೆಳೆಸುತ್ತಾರೆ. ಇದರ ಎಲೆಗಳು ವರ್ಷವಿಡೀ ಹಸಿರಾಗಿರುತ್ತವೆ.

ಹೂವು ಅರಳಲು ಸಾಕಷ್ಟು ಬಿಸಿಲು ಬೇಕು. ಬಿರುಬಿಸಿಲಿನಲ್ಲೂ ಅರಳುತ್ತವೆ. ನೆರಳು ಇದ್ದರೂ ಪರವಾಗಿಲ್ಲ. ಆದರೆ ತೀವ್ರ ಚಳಿಗಾಲವಿದ್ದರೆ ಹೂಕುಂಡಗಳನ್ನು ಸಾಕಷ್ಟು ಬೆಳಕು ಇರುವ ಒಳಾಂಗಣದಲ್ಲಿ ತಂದು ಇಡುವುದು ಒಳ್ಳೆಯದು. ರುಬಿಯೇಷಿಯೇ ಕುಟುಂಬದ ಪೆಂಟಾಸ್ ಸಂಕುಲದ ಹೂವಿದು. ಇದಕ್ಕಿರುವ ಇತರ ಹೆಸರುಗಳೆಂದರೆ ಪೆಂಟಾಸ್ ಕಾರ್ನಿಯಾ (Pentas Carnea) ಮತ್ತು ಈಜಿಪ್ಟ್ ಸ್ಟಾರ್ ಕ್ಲಸ್ಟರ್. ಪೆಂಟಾಸ್ ಎನ್ನುವುದು ಗ್ರೀಕ್ ಶಬ್ದ; ಅದರ ಅರ್ಥ ಪಂಚದಳ. ಕೆಲವು ಪ್ರಬೇಧಗಳ ಹೂಗಳಲ್ಲಿ ಎರಡು ದಳಗಳು ಕಾಣಿಸುವುದೂ ಉಂಟು.

ಪೂರ್ವ ಆಫ್ರಿಕಾ ಮತ್ತು ಯೆಮನ್ ದೇಶಗಳಲ್ಲಿ ಹೆಚ್ಚಾಗಿ ಬೆಳೆಯುವ ಈ ಪೊದೆಗಿಡ ಕ್ಕೆ ನಿರ್ವಹಣೆ ವೆಚ್ಚವೂ ಹೆಚ್ಚೇನಲ್ಲ. ಚಳಿಗಾಲದಲ್ಲಿ ಕಡಿಮೆ ನೀರು ಹಾಕಬೇಕು. ವರ್ಷ ಪೂರ್ತಿ ಹೂಗಳನ್ನು ಬಿಡುವ ಈ ಸಸ್ಯ ಆ ಕಾರಣಕ್ಕಾಗಿಯೇ ಒಳಾಂಗಣ ಅಲಂಕಾರದಲ್ಲೂ ಪ್ರಮುಖ ಸ್ಥಾನ ಪಡೆದಿದೆ.